ಕರ್ನಾಟಕ ಸರ್ಕಾರ

# ರಾಷ್ಟ್ರೀಯ ಆರೋಗ್ಯ ಅಭಿಯಾನ

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಬೆಂಗಳೂರು
ಆರೋಗ್ಯ ಸೌಧ, ಮಹಡಿ, ಮಾಗಡಿರಸ್ತೆ, ಬೆಂಗಳೂರು-560023

ಸಂಖ್ಯೆ: ಎನ್‌ಹೆಚ್‌ಎಂ/ಡಿಡಿ/ಐಎಂಎಂ/41/2020-21 ದಿನಾಂಕ: 29.05.2021

ಇವರಿಗೆ,

ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.
ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತ ಕಛೇರಿ.

ಮಾನ್ಯರೆ,

ವಿಷಯ ಕೋವಿಡ್ ಲಸಿಕಾಕರಣದಲ್ಲಿ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆಯ ಎರಡನೇ ಡೋಸ್‌ಗೆ ಅರ್ಹರಿರುವ ಫಲಾನುಭವಿಗಳಿಗೆ ಲಸಿಕಾಕರಣಕ್ಕೆ ಆದ್ಯತೆ ನೀಡುವ ಕುರಿತು

ಉಲ್ಲೇಖ: ನಿರ್ದೇಶನಾಲಯದ ಸಮಸಂಖ್ಯೆ ಪತ್ರ ದಿನಾಂಕ: 13.05.2021 ಮತ್ತು 15.05.2021

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳಲ್ಲಿ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆಯ ಎರಡನೇ ಡೋಸ್‌ಗೆ ಬಾಕಿ ಇರುವ ಫಲಾನುಭವಿಗಳಿಗೆ ಲಸಿಕಾಕರಣವನ್ನು ಆದ್ಯತೆಯ ಮೇರೆಗೆ ನಡೆಸಲು ತಿಳಿಸಲಾಗಿತ್ತು. ಹಾಗಿದ್ದಾಗ್ಯೂ ದಿನಾಂಕ 29.05.2021 ರ ಮಾಹಿತಿಯಂತೆ ಕೋವ್ಯಾಕ್ಸಿನ್‌ನ ಎರಡನೇ ಡೋಸ್‌ಗೆ ಬಾಕಿ ಇರುವವರ **ಸಂಖ್ಯೆ ಒಟ್ಟು 3,25,153 (6 ವಾರ ಮೇಲ್ಪಟ್ಟವರು)** ಇರುತ್ತದೆ ಮತ್ತು ಕೋವಿಶೀಲ್ಡ್ ಎರಡನೇ ಡೋಸ್‌ಗೆ ಬಾಕಿ ಇರುವವರ **ಸಂಖ್ಯೆ ಒಟ್ಟು 1,75,414 (12 ವಾರ ಮೇಲ್ಪಟ್ಟವರು)** ಇರುತ್ತದೆ. **ದಿನಾಂಕ 29.05.2021 ರ ಜಿಲ್ಲಾವಾರು ಕೋವಿಶೀಲ್ಡ್/ಕೋವ್ಯಾಕ್ಸಿನ್ ಲಸಿಕೆಯ ಎರಡನೇ ಡೋಸ್‌ಗೆ ಬಾಕಿ ಇರುವ ಪಟ್ಟಿಯನ್ನು ಲಗತ್ತಿಸಿದೆ.**

ಈ ಹಿನ್ನೆಲೆಯಲ್ಲಿ, ಬಾಕಿ ಇರುವ ಈ ಫಲಾನುಭವಿಗಳ ಸಂಪೂರ್ಣ ಲಸಿಕಾಕರಣಕ್ಕೆ ತಮ್ಮಲ್ಲಿ ಈಗಾಗಲೇ ಸಾಕಷ್ಟು ಲಸಿಕೆಗಳ ದಾಸ್ತಾನು ಇದ್ದು, ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಕೋರಲಾಗಿದೆ.

- ಈ ಫಲಾನುಭವಿಗಳನ್ನು ಕೋವಿಡ್ ಲಸಿಕಾಕರಣಕ್ಕೆ ಬರಲು ಎಸ್‌ಎಂಎಸ್, ವಾಟ್ಸಪ್ ಅಥವಾ ದೂರವಾಣಿ ಮುಖಾಂತರ / ವೈಯಕ್ತಿಕವಾಗಿ ಸಂಪರ್ಕಿಸಿ ಅವರು ಲಸಿಕೆ ಪಡೆಯುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದು.
- ಲಸಿಕೆಗಳ ಲಭ್ಯತೆ ವಿಶೇಷವಾಗಿ ಕೋವ್ಯಾಕ್ಸಿನ್ ಲಸಿಕೆಯ ಲಭ್ಯತೆಯ ಪೂರ್ಣ ಮಾಹಿತಿಯನ್ನು (ಯಾವ ಲಸಿಕಾ ಕೇಂದ್ರಗಳಲ್ಲಿ ಎಷ್ಟು ಲಸಿಕೆ ಲಭ್ಯವಿದೆ) ಸಾರ್ವಜನಿಕರಿಗೆ ಗೊತ್ತುಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದು.
- ಕೋವಿಡ್ ಲಸಿಕಾ ಕೇಂದ್ರಗಳಲ್ಲಿ ಎರಡನೇ ಡೋಸ್‌ಗೆ ಬಾಕಿ ಇರುವ ಫಲಾನುಭವಿಗಳು ಆನ್‌ಸೈಟ್ ಬಂದಾಗ ಅವರನ್ನು ವಾಪಸ್ಸು ಕಳುಹಿಸದೇ ಆದ್ಯತೆ ಮೇರೆಗೆ ಕೋವಿಡ್ ಲಸಿಕಾಕರಣ ನಡೆಸುವುದು.

- ಜಿಲ್ಲಾ ಕೋವಿಡ್ ನಿಯಂತ್ರಣ ಕೊಠಡಿಯಿಂದ ಪ್ರತಿ ದಿನ ಕೋವಿಡ್ ಲಸಿಕಾಕರಣದ ಎರಡನೇ ಡೋಸ್‌ಗೆ ಬಾಕಿ ಇರುವ ಫಲಾನುಭವಿಗಳಿಗೆ due list ಪ್ರಕಾರ ದೂರವಾಣಿ ಮೂಲಕ ಸಂಪರ್ಕಿಸಿ ಕೋವಿಡ್ ಲಸಿಕೆ ಪಡೆಯಲು ತಿಳಿಸುವುದು.
- ದಿನದ ಕೊನೆಯಲ್ಲಿ ಅಂದಿನ ದಿನದ ಡೇಟಾ ರೀಕನ್ಸಿಲೇಶನ್ ಮಾಡಿ ವರದಿ ಕ್ರೂಢೀಕರಿಸಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿಗಳಿಗೆ ಸಲ್ಲಿಸಲು ಸೂಚಿಸುವುದು ಮತ್ತು ಕಾರಣಾಂತರಗಳಿಂದ ಲಸಿಕೆ ಪಡೆಯದವರ/ಪಡೆಯಲಾಗದ ಫಲಾನುಭವಿಗಳ ಅನುಸರಣೆ ಮಾಡಿ ಅವರು ಲಸಿಕೆ ಪಡೆದಿರುವುದನ್ನು ಖಾತರಿಪಡಿಸಿಕೊಳ್ಳುವುದು.
- ಕೋವಿಡ್ ನಿಗ್ರಹಕ್ಕಾಗಿ ಸದ್ಯ ಚಾಲ್ತಿಯಲ್ಲಿರುವ ಲಾಕ್‌ಡೌನ್ ಸಮಯದಲ್ಲಿಯೂ ಅರ್ಹ ಫಲಾನುಭವಿಗಳು ಎರಡನೇ ಡೋಸ್ ಲಸಿಕೆ ಪಡೆಯಲು ಸಜ್ಜುಗೊಳಿಸುವುದು (Mobilize).

ಸದರಿ ವಿಷಯದ ಅನುಸರಣೆಯನ್ನು ತಾವುಗಳು ಖುದ್ದಾಗಿ ಮೇಲ್ವಿಚಾರಣೆ ಮಾಡಲು ಕೋರಲಾಗಿದೆ.

ಅಪರ ಮುಖ್ಯ ಕಾರ್ಯದರ್ಶಿಗಳು
ಮತ್ತು ಅಭಿವೃದ್ಧಿ ಆಯುಕ್ತರು
ಕರ್ನಾಟಕ ಸರ್ಕಾರ

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ,**

1. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು.
2. ಮುಖ್ಯ ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ) ಬಿಬಿಎಂಪಿ, ಬೆಂಗಳೂರು
3. ಎಲ್ಲಾ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿಗಳು.
4. ಲಸಿಕಾಧಿಕಾರಿಗಳು, ಬಿಬಿಎಂಪಿ.

**ಪ್ರತಿಯನ್ನು ಮಾಹಿತಿಗಾಗಿ,**

1. ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
3. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
4. ವಿಶೇಷ ಆಯುಕ್ತರು, ಬಿಬಿಎಂಪಿ, ಬೆಂಗಳೂರು.
5. ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಛೇರಿ.
6. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
7. ಅಪರ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
8. ಯೋಜನಾ ನಿರ್ದೇಶಕರು(ಆರ್‌ಸಿಹೆಚ್) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು
9. ಉಪನಿರ್ದೇಶಕರು(ಲಸಿಕೆ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು
10. ಉಪನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
11. ಕಛೇರಿ ಪ್ರತಿ.